Another fire accident took place at Ravoor Tanda on 20-3-1979 affecting five families. The loss is estimated at Rs. 6,930/-. Cash relief has been paid to the sufferers as per rules, during March 1979.

As regards drinking water wells, the Executive Engineer, PHE Mechanical Division has been asked to take up the works on priority basis.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸುಟ್ಟು ಹೋದದ್ದರಿಂದ ಲಾಸ್ ಆಗಿರುವುದು ೧೪,೬೫೫ ರೂಪಾಯಿಗಳು ಎಂದು ಹೇಳಿದ್ದೀರಿ ಮತ್ತು ಕ್ಯಾಷ್ ರಿಲೀಫ್ ೫,೬೩೦ ಎಂದು ಹೇಳಿದ್ದೀರಿ. ತಹಶೀಲ್ದಾರ್‌ರವರಿಗೆ ೩೦೦ ರೂಪಾಯಿ ಮ್ಯಾಕ್ಸಿಮಂ ಸ್ಯಾಂಕ್ಷನಿಂಗ್ ಅಥಾರಿಟಿ ಇರುತ್ತದೆ ಆದರೆ ಕೆಲವು ಜನರಿಗೆ ಸಾವಿರಾರು ರೂಪಾಯಿಗಳ ನಷ್ಟವಾಗಿದೆ. ಯಾವ ರೀತಿ ನಷ್ಟವಾಗಿದೆಯೆಂದರೆ ಅವರು ಇಡೀ ವರ್ಷ ದುಡಿದು ತಮ್ಮ ಒಂದು ವರ್ಷದ ಗಂಜಿ ಸಲುವಾಗಿ ಇಟ್ಟಂಥ ಧಾನ್ಯಧಾನಗಳು ಸುಟ್ಟು ಹೋಗಿವೆ. ಆದ್ದರಿಂದ ಹೆಚ್ಚಿನ ಲುಕ್ಸಾನು ಕೆಲವರಿಗೆ ಆಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಡಿ.ಸಿ.ಯವರ ಕಡೆಯಿಂದ ಅವರಿಗೆ ಎಷ್ಟು ಲುಕ್ಸಾನಾಗಿದೆ ಅಷ್ಟು ಪೂರ್ತಿ ಹಣವನ್ನು ಸ್ಯಾಂಕ್ಷನ್ ಮಾಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲದೆ ೩೦ ವರ್ಷಗಳ ಕಾಲದಿಂದಲೂ ಲಂಬಾಣಿ ಜನರು ಗುಡಿಸಲುಗಳಲ್ಲೇ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಅವರಿಗೆ ಮನೆಗಳನ್ನು ಕಟ್ಟುವ ಬಗ್ಗೆ ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು ಸಿಟಿಯಲ್ಲಿ ಹೇಗೆ ಸ್ಲಂ ಕ್ಲಿಯರೆನ್ಸ್ ಬಗ್ಗೆ ಯೋಜನೆ ಹಾಕಿಕೊಂಡಿದ್ದೀರಿ ಅದೇ ರೀತಿಯಲ್ಲಿ ಅಲ್ಲಿ ಗುಡಿಸಲುಗಳು ಇರುವಾರಭ್ಯಂತ ನೋಡಿಕೊಂಡು ಎಲ್ಲಾ ಜನರಿಗೂ ಮನೆ ಕಟ್ಟುವ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ, ಅಪರಿಗೆ ನೀರಿನ ವ್ಯವಸ್ಥೆ ಇಲ್ಲ, ಮತ್ತೆ ಆ ಜನಗಳಿಗೆ ರೋಡು ಇಲ್ಲ. ಈಗ ಆ ಜನಗಳಲ್ಲಿ ಬಂದು ಭಾವನೆ ಬರುತ್ತಾ ಇದೆ. ಏನೆಂದರೆ, ಹರಿಜನರಿಗೆ ಅಲ್ಪ ಮಟ್ಟಿಗೆ ಕೆಲಸವಾಗಿದೆ, ಆದರೆ ಸರ್ಕಾರದಿಂದ ನಮ್ಮ ಟ್ರೈಬ್ಸ್‌ನವರಿಗೆ ಸವಲತ್ತು ಮಾಡಿಕೊಟ್ಟಿಲ್ಲ ಎಂದು ತಿಳಿದುಕೊಂಡಿದ್ದಾರೆ. ಆದುದರಿಂದ ಇದರ ಬಗ್ಗೆ ಆಸಕ್ತಿ ವಹಿಸಿ ಒಳ್ಳೆಯ ಮನಸ್ಸಿನಿಂದ ಈ ಜನರಿಗೆ ಸವಲತ್ತು ಮಾಡಿಕೊಡಬೇಕು ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ಲುಕ್ಸಾನಾಗಿದೆ ಅಷ್ಟು ಲುಕ್ಸಾನನ್ನು ತುಂಬಿ ಕೊಡಲಿಕ್ಕೆ ಸರ್ಕಾರದಲ್ಲಿ ಕಾನೂನಿಲ್ಲ. ರೂಲ್ಸ್ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಕೊಟ್ಟಿದ್ದೇವೆ. ಮತ್ತೆ ಇನ್ನೂ ಹೆಚ್ಚು ಕೊಡಬೇಕು ಎಂದು ಹೇಳಿದ್ದಾರೆ, ಅದರ ಬಗ್ಗೆ ನಾವು ಯೋಚನೆ ಮಾಡಿಸಿದ್ದೇವೆ, ಅದು ಇನ್ನೂ ಕೊನೇ ಹಂತಕ್ಕೆ ಬಂದಿಲ್ಲ, ಮತ್ತೆ ಮನೆ ಕಟ್ಟಿಕೊಡುವ ವಿಚಾರ ಏನಿದೆ ಅದರ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಸೂಕ್ತ ಸಲಹೆ ಕೊಡುತ್ತೇನೆ. ಮತ್ತೆ ಅಲ್ಲಿ ಎಷ್ಟು ಮನೆಗಳು ಸುಟ್ಟು ಹೋಗಿವೆ, ಆ ಜನರಿಗೆ ಮನೆ ಕಟ್ಟಿಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ, ಹಾಗೂ ನೀರಿನ ವ್ಯವಸ್ಥೆ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಸೂಚನೆ ಕೊಡುತ್ತೇನೆ. ಗುಡ್ಡಗಾಡಿನ ಜನರಿಗೆ ಸರಿಯಾದ ಗಮನವನ್ನು ಕೊಡುತ್ತಿಲ್ಲ ವೆಂದು ಮಾನ್ಯ ಸದಸ್ಯರು ಹೇಳಿದರು. ಅದು ನನ್ನ ಗಮನಕ್ಕೆ ಬಂದಿಲ್ಲ. ಅಂಥಾದ್ದು ಏನಾದರೂ ನಡೆದಿದ್ದರೆ ಅಂಥಾ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೊಂದು ತಮಗೆ ನಾನು ಭರವಸೆ ಕೊಡುವುದೇನೆಂದರೆ ಅಂಥಾ ತಾರತಮ್ಯ ಮಾಡದ ರೀತಿಯಲ್ಲಿ ಅವರಿಗೆ ನಾನು ಸೂಚನೆ ಕೊಟ್ಟು ಅನುಕೂಲ ಮಾಡಿಸಿಕೊಡುತ್ತೇನೆಂದು ಹೇಳಬಯಸುತ್ತೇನೆ.

Matter under rule 312

re : non-supply of protected drinking water to the added villages of 35 B Division of Bangalore City.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ಸದಗುಂಟಿ, ಮಡಿವಾಳ, ಚಿಕ್ಕ ಆಡಿಗೋಡಿ, ತಾವರಕೆರೆ ಈ ನಾಲ್ಕು ಹಳ್ಳಿಗಳು ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ೧೯೭೫ರಲ್ಲಿಯೇ ಸೇರಿವೆ. ಅಲ್ಲಿ ಅವರು ಮುನಿಸಿಪಲ್ ಟ್ಯಾಕ್ಸ್‌ನ್ನು ಕಟ್ಟುತ್ತಿದ್ದಾರೆ. ಅಲ್ಲಿ ಅವರಿಗೆ ಬೇರೆ

ವ್ಯವಸ್ಥೆಗಳಾಗಿವೆ ಆದರೆ ನೀರಿನ ವ್ಯವಸ್ಥೆ ಮಾತ್ರ ಇಲ್ಲಿಯವರೆಗೆ ಆಗಿಲ್ಲ. ಇದರ ಬಗ್ಗೆ ಒಂದು ಎಸ್ಟಿಮೇಟ್ ಪಿ. ಪೇರ್ ಆಗಿ ಸರ್ಕಾರಕ್ಕೆ ಮೊನ್ನೆ ಜನವರಿಯಲ್ಲಿ ಬಂದಿತ್ತೆಂದು ನನಗೊಂದು ತಿಳುವಳಿಕೆ ಕಾರ್ಪೊರೇಷನ್‌ನಿಂದ ಕೂಡ ಬಂದಿದೆ. ಅಲ್ಲಿ ಬಿ ಡಿ.ಎ. ಲ್ಯಾಂಡ್ ಸ್ವಲ್ಪ ಬಂದಿರುವುದರಿಂದ ವಾಟರ್ ಸಪ್ಲೈ ಬೋರ್ಡ್‌ನವರಿಂದ ರಿ ಎಸ್ಟಿಮೇಟ್ ಆಗಿ ಸ್ವಲ್ಪ ಹಣ ಜಾಸ್ತಿ ಕಟ್ಟಬೇಕಾಗಿ ಬಂದಿರುವುದರಿಂದ, ಈಗ ಕಾರ್ಪೊರೇಷನ್‌ನವರು ಮತ್ತು ಬಿ.ಡಿ.ಎ.ಯವರು ಇಬ್ಬರೂ ಸೇರಿ ಅದನ್ನು ಕಟ್ಟಬೇಕಾಗಿದೆ ಅದಕ್ಕಾಗಿ ಅವರು ಸರ್ಕಾರವೇ ಇದಕ್ಕೆ ಸ್ಯಾಂಕ್ಷನ್ ಮಾಡಬೇಕಾಗಿದ್ದೆಂದು ಸರ್ಕಾರಕ್ಕೇ ಕಳುಹಿಸಿಕೊಟ್ಟಿದ್ದಾರೆ. ಅದು ಬಂದು ಈಗಾಗಲೇ ೬ ತಿಂಗಳು ಆಯಿತು, ಅದು ತಮ್ಮ ಗಮನಕ್ಕೂ ಬಂದಿರಬಹುದೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಅದನ್ನು ಆದಷ್ಟುಬೇಗ ಸ್ಯಾಂಕ್ಷನ್ ಮಾಡಿಸಿಕೊಟ್ಟು ಅಲ್ಲಿಗೆ ವ್ಯವಸ್ಥೆ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯೬೪ ರಿಂದ ಅಲ್ಲಿಯ ಜನಗಳು ಟ್ಯಾಕ್ಸ್‌ನ್ನು ಕಟ್ಟುತ್ತಿದ್ದಾರೆ, ಬಾವಿಗಳಲ್ಲಿಯೂ ಸಹ ನೀರನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಸಮ್ಮರ್‌ನಲ್ಲಿ ನೀರೂ ಇರುವುದಿಲ್ಲ. ಇದರಿಂದಾಗಿ ಜನಗಳು ಒಹಳ ತೊಂದರೆ ಪಡುತ್ತಿದ್ದಾರೆ. ಮುನಿಸಿಪಲ್ ಏರಿಯಾಗೆ ಬಂದು ಈಗಾಗಲೇ ೧೦, ೧೨ ವರ್ಷಗಳಾದರೂ ಇನ್ನೂ ಅಲ್ಲಿಯ ಜನರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಇನ್ನೊಂದು ಶೋಚನೀಯವಾದ ಸಂಗತಿ ಎನೆಂದರೆ ಅದೇ ಪಕ್ಷದಲ್ಲಿರುವ ಕೋರಮಂಗಲ ಲೇಔಟ್‌ಗೆ ನೀರನ್ನು ಕೊಟ್ಟಿದ್ದಾರೆ. ಅಲ್ಲಿ ಇರುವವರೆಲ್ಲರೂ ದೊಡ್ಡ ದೊಡ್ಡ ಶ್ರೀಮಂತರೇ, ಆ ರೀತಿ ಒಬ್ಬರಿಗೊಂದು ಮತ್ತೊಬ್ಬರಿಗೊಂದು ಮಾಡದೇ ಏನು ಎಳೂವರೆ ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಬಂದಿದೆ ಅದನ್ನು ತಕ್ಷಣವೇ ಸ್ಯಾಂಕ್ಷನ್ ಮಾಡಿಸಿಕೊಟ್ಟು ಕೂಡಲೇ ಅಲ್ಲಿಯ ಜನಗಳಿಗೆ ನೀರನ್ನು ಒದಗಿಸಿಕೊಡುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಸ್ವಾಮಿ ?

SRI H. C. SRIKANTAIAH (Minister for Municipal Administration)– Thirty two villages and twenty nine hamlets were included in the Bangalore City Corporation in the year 1964. Among these newly added villages were Madiwala, Tavarekere, Chikka Adugodi and Suddaguntepalya.

2. A comprehensive estimate of Rs. 42.00 lakhs for providing water supply to the above villages as well as other villages added to the Bangalore City Corporation during 1964 was prepared by the Bangalore Water Supply and Sewerage Board. For execution of this work, a sum of Rs. 20.00 lakhs was placed at the disposal of the Bangalore Water Supply and Swerage Board out of which Rs. 10.00 lakhs was contributed by Government and Rs. 10.00 lakhs by the Bangalore City Corporation. The Bangalore Water Supply and Sewerage Board executed work to the extent of the amounts deposited with it. The Bangalore Water Supply and Sewerage Board also forwarded a line estimate amounting to Rs. 37.18 lakhs to the Bangalore City Corporation during 1975 for providing water supply to the remaining villages out of thirty two villages and twenty-nine hamlets to which water supply had not been provided. In this estimate proposals were included for providing water supply to Madiwala, Tavarekere, Chikka Adugodi and Suddaguntepalya. The Bangalore Water Supply and Sewerage Board requested the Corporation to countersign the estimates and to deposit the amount with the Board.

3. On the request of the Corporation Authorities for furnishing detailed estimates for providing water supply to Madivala, Tavarekere, Suddaguntepalya, the Bangalore Water Supply and Sewerege Board furnished estimates amounting to Rs. 8.96 lakhs. The Bangalore City Corporation however took the stand that it was the obligatory duty of the Bangalore Water Supply and Sewerage Board to lay the mains and sub-mains in the Corporation limits and that the Corporation was not required to place any funds with the Bangalore Water Supply and Sewerage Board for taking up the work.

4. Meanwhile, the Bangalore Development Authority prepared a development scheme for Suddaguntepalya village at an estimated cost of Rs. 11.70 lakhs which included water supply to this village. The Bangalore Development Authority has also prepared the Tavarekere, Madivala scheme at an estimated cost of Rs. 20 lakhs for improving the five villages of Madivala, Tavarekere, Chinna Madivala Suddaguntepalya and Gurappanapalya.

5. The schemes for providing water supply to these villages have been prepared by the Bangalore Water Supply and Sewerage Board and the Bangalore Development Authority. The execution of these schemes will be taken up at an early date after deciding the investments to be made therein by the concerned agencies namely the Bangalore City Corporation, the Bangalore Development Authority and the Bangalore Water Supply and Sewerage Board.

ಸನ್ಮಾನ್ಯ ಶ್ರೀ ಎಂ. ಚಂದ್ರಶೇಖರಯ್ಯನವರೇನು ಒಂದು ವಿಷಯವನ್ನು ಚರ್ಚೆಗೆ ತಂದಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಅದರಲ್ಲಿ ಒಂದು ಕನ್‌ಫ್ಯೂಜ್ ಉದ್ಭವ ಆಗಿಬಿಟ್ಟಿದೆ. ಅವರು ಹೇಳಿದ ಹಾಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ, ಸಿಟಿ ಕಾರ್ಪೊರೇಷನ್ ಮತ್ತು ಈ ವಾಟರ್ ಸಿವರೇಜ್ ಬೋರ್ಡ್‌ನವರೆಲ್ಲ ಸ್ವಲ್ಪ ಕನ್‌ಫ್ಯೂಜ್ ಕ್ರಿಯೇಟ್ ಆಗಿರುವುದರಿಂದ ಈ ಮೂರು ಏಜೆನ್ಸಿಗಳವರನ್ನು ಮೀಟಿಂಗ್‌ಗೆ ಕರೆಸಿ ಕೂಲಂಕುಷವಾಗಿ ವಿಚಾರಮಾಡಿ, ಯಾವ ಹಿನ್ನೆಲೆಯಲ್ಲಿ ಏನಾಗಿದೆಯೆಂಬುದನ್ನು ತಿಳಿದುಕೊಂಡು ಅದನ್ನು ಆದಷ್ಟು ಬೇಗ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Budget Estimates for 1979–80
(Demands for grants)

Demand Nos. 5,7,8 and 53

(debate continued)

ಛೇರ್ಮನ್.— ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಶ್ರೀ ವಿ. ಬಿ. ಭಾವಿಯವರು ಪ್ರಾರಂಭಿಸಬಹುದು.

† ಶ್ರೀ ವಿ. ಬಿ. ಭಾವಿ (ಮುಂಡರಗಿ):— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳು ಮುಂಡಿಸಿದಂಥ ಬೇಡಿಕೆಗಳಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತಾ, ಕೈಗಾರಿಕಾ ಬೇಡಿಕೆಗಳ ಮೇಲೆ ಮಾತನಾಡುತ್ತಾ ಯಾವ ರೀತಿಯಲ್ಲಿ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ನೆಲಸಬೇಕೆಯೋ ಇಲ್ಲ ಎನ್ನುವುದಕ್ಕೆ ಕೆಲವೊಂದು ಸಲಹೆಗಳನ್ನು ಕೊಡಬಯಸುತ್ತಿದ್ದೇನೆ. ಏತಕ್ಕೆಂದರೆ ನಮ್ಮ ಕನ್ನಡ ನಾಡಿನ ಖ್ಯಾತ